ಗಮನ ಸೆಳೆಯುವ ಸೂಚನೆಗಳು

ರಾಜಭವನ ರಸ್ತೆಯ ಪರಾಗ್ ಹೋಟೆಲ್ ಆವರಣದಲ್ಲಿ ಅಕ್ರಮವಾಗಿ ಕಟ್ಟಲ್ಪಡುತ್ತಿರುವ ಪಂಚತಾರಾ ಹೋಟೆಲ್ ನಿರ್ಮಾಣದಲ್ಲಿ ಮಂತ್ರಿಗಳೋರ್ವರು ಶಾಮೀಲಾಗಿರುವುದು.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ರಾಜಭವನ ರಸ್ತೆಯ ಪರಾಗ್ ಹೋಟೆಲ್ ಆವರಣವಲ್ಲಿ ನಡೆಯುತ್ತಿರುವ ಪಂಚತಾರಾ ಹೋಟೆಲ್ ಕಟ್ಟಡ ಅಕ್ರಮವಾಗಿ ಏನು ನಿರ್ಮಾಣವಾಗುತ್ತಿದೆ ಮತ್ತು ಅದರ ಬಗ್ಗೆ ಒಬ್ಬ ಸಚಿವ ಸಂಪುಟದ ಮಂತ್ರಿಗಳೂ ಸಹ ಶಾಮೀಲಾಗಿರುವ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್(ಮುಖ್ಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೆ, ಈ ಗಮನ ಸೆಳೆಯುವ ಸೂಚನೆಗೆ ಹೇಳಿಕೆ ಈ ರೀತಿ ಇದೆ.

ಶ್ರೀ ಲೇಟ್ ಪದ್ಮಶ್ರೀ ಹಂಪಾಯಂಜಾನ್ ಮೀರ್ಜಾ ಇವರಿಗೆ ಸೇರಿದ ರಾಜಭವನ ರಸ್ತೆ ಪ್ಲಾಟ್ ಸಂಖ್ಯೆ ಸಿರಲ್ಲಿನ ೧೧,೩೬೯.೮೭ ಚದರ ಮೀಟರ್ ಜಮೀನನ್ನು ದಿನಾಂಕ ೨೨-೫-೧೯೬೯ರಲ್ಲಿ ಶ್ರೀ ಶ್ರೀನಿವಾಸ್ ವಿ. ಜನ್ನು ಎಂಬುವರಿಗೆ ೫೦ ವರ್ಷಗಳಿಗೆ ಗುತ್ತಿಗೆಗೆ ನೀಡಲಾಗಿತ್ತು. ಈ ಸ್ವತ್ತನ್ನು ಗುತ್ತಿಗೆದಾರರು ಪುನಃ ಪರಾಗ ಹೋಟೆಲ್ ಪ್ರೈ. ಲಿ. ಇವರಿಗೆ ದಿನಾಂಕ ೧೪-೪-೧೯೭೫ರಲ್ಲಿ ಮರು ಬಾಡಿಗೆಗೆ ನೀಡಿದರು.

೨. ಶ್ರೀ ಶ್ರೀನಿವಾಸ ವಿ. ಜನ್ನು ಇವರು ಸದರಿ ಸ್ವತನ್ನು ನಗರ ಭೂ ಪರಿಮಿತಿ ಕಾಯ್ದೆ ಕಾಲಂ ೬(೧)ರನ್ವಯ ಘೋಷಣೆ ಮಾಡಿಕೊಂಡಿದ್ದು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಯವರು ಘೋಷಣೆದಾರರು ೪,೬೪೭.೯೮ ಚದರ ಮೀಟರ್ ಹೆಚ್ಚುವರಿ ಜಮೀನನ್ನು ಹೊಂದಿರುವುದಾಗಿ ೧೯೮೧ ರಲ್ಲಿ ನಿರ್ಧರಣೆ ಮಾಡಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ/ಪನಇ/೩೪೪/ಸಿಇಬಿ/೮೧, ದಿನಾಂಕ ೩-೧-೧೯೮೩ರಲ್ಲಿ ಸದರಿ ಹೆಚ್ಚುವರಿ ಖಾಲಿ ಜಮೀನಿಗೆ ನಗರ ಭೂ ಪರಿಮಿತಿ ಕಾಯ್ದೆಯನ್ವಯ ವಿನಾಯಿತಿ ನೀಡಿ, ಸದರಿ ಜಮೀನಿನಲ್ಲಿ ಬಿಲ್ಡಿಂಗ್ ಕಾಂಪೆಕ್ಸ್ ಕಟ್ಟಲು ಉದ್ದೇಶಿಸಿರುವ ಕಟ್ಟಡಗಳಲ್ಲಿ ಮಹಡಿಗಳನ್ನು ಸರ್ಕಾರದ ಅಥವಾ ಸಾರ್ವಜನಿಕ ಉದ್ದಿಮೆಯ ಉಪಯೋಗಕ್ಕಾಗಿ, ಗೊತ್ತುಪಡಿಸಿದ ಬಾಡಿಗೆ ಮತ್ತು ಅನುಭೋಗಾವಧಿಯಲ್ಲಿ ಬಿಟ್ಟು ಕೊಡುವ ಷರತ್ತಿನೊಂದಿಗೆ ಹಾಗೂ ಇನ್ನಿತರ ಷರತ್ತುಗಳೊಂದಿಗೆ ಬಿಲ್ಡಿಂಗ್ ಕಾಂಪೆಕ್ಸ್ ನಿರ್ಮಾಣಕ್ಕೆ ಅನುಮತಿ ನೀಡಲಾಗಿತ್ತು. ನಂತರ ಸರ್ಕಾರದ ಆದೇಶ ಸಂಖ್ಯೆ/ಹೆಚ್‌ಯುಡಿ/೧೫೫ಸಿಪಿಜೆ/೮೭, ದಿನಾಂಕ ೧೭-೬-೧೯೮೭ರಲ್ಲಿ ಉದ್ದೇಶಿತ ಕಟ್ಟಡಗಳನ್ನು ಪೂರ್ಣಗೊಳಿಸಲು ದಿನಾಂಕ ೨-೧-೧೯೯೦ರವರೆಗೆ ಕಾಲಾವಧಿ ವಿಸ್ತರಿಸಲಾಗಿತ್ತು.

೩. ಅಧಿಕ ವಿಶೇಷ ಜಿಲ್ಲಾಧಿಕಾರಿ, ನಗರ ಭೂ ಪರಿಮಿತಿ, ಬೆಂಗಳೂರು ಇವರು ಈ ಮಧ್ಯೆ ಕೆಲವು ಷರತ್ತುಗಳ ಉಲ್ಲಂಘನೆಯ ಕಾರಣಕ್ಕಾಗಿ ನಗರ ಭೂಪರಿಮಿತಿ ಕಾಯ್ದೆ ೫೦ರನ್ವಯ ಆದೇಶ ಹೊರಡಿಸಿ ವಿನಾಯಿತಿದಾರರು ಕಟ್ಟುತ್ತಿರುವ ಕಟ್ಟಡಗಳನ್ನು ಕೆಡವಿ ಹಾಕುವಂತೆ ನೋಟೀಸ್ ನೀಡಿರುತ್ತಾರೆ. ಈ ಕ್ರಮದ ವಿರುದ್ಧ ಶ್ರೀನಿವಾಸ ವಿ. ಜನ್ನು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ನಂ. ೯೦೫೫/೮೯ರಲ್ಲಿ ದಾವೆ ಮಾಡಿದ್ದು ರಾಜ್ಯ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ದಾಖಲು ಮಾಡಿಕೊಂಡು ಈ ಹಿಂದೆ ವಿನಾಯಿತಿ ನೀಡಲಾಗಿದ್ದ ಸರ್ಕಾರದ ಆದೇಶ ಹಾಗೂ ಸಕ್ಷಮ ಪ್ರಾಧಿಕಾರಿಗಳು ಕಾಲಂ ೫೦ರನ್ವಯ ಹೊರಡಿಸಿರುವ ಆದೇಶಗಳೆರಡನ್ನು ಸ್ಥಗಿತಗೊಳಿಸಿದೆ.

೪. ಸರ್ಕಾರವು ಈ ಜಮೀನನ್ನು ಸುಬರ್ದಿಗೆ ತೆಗೆದುಕೊಳ್ಳುವ ದೃಷ್ಟಿಯಿಂದ ''ಹೆಚ್ಚುವರಿ ಖಾಲಿ ಭೂಮಿಯನ್ನು'' ನಗರ ಭೂಪರಿಮಿತಿ ಕಾಯ್ದೆ ೧೯೭೬ರನ್ವಯ ಮತ್ತು ''ಉಳಿಸಿಕೊಳ್ಳಬಹುದಾದ ವಿಸ್ತೀರ್ಣವನ್ನು'' ಭೂ ಸ್ವಾಧೀನ ಕಾಯ್ದೆ ೧೮೯೪ರ ನಿಯಮಾವಳಿಗಳನ್ವಯ ಭೂ ಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿದ್ದು, ಈಗಾಗಲೇ ಭೂಸ್ವಾಧೀನ ಕಾಯ್ದೆ ಕಾಲಂ ೬(೧)ರನ್ವಯ ನಗರ ಭೂ ಪರಿಮಿತಿ ಕಾಯ್ದೆಗೆ ಒಳಪಡದ ಉಳಿಸಿಕೊಳ್ಳಬಹುದಾದ ವಿಸ್ತೀರ್ಣವಾದ ೫೭೨೧/೮೯ ಚದರ ಮೀಟರ್ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳಲು ದಿನಾಂಕ ೦೫-೫-೧೯೯೦ರಲ್ಲಿ ಕಂದಾಯ ಇಲಾಖೆಯು ಅಂತಿಮ ಅಧಿಸೂಚನೆ ಹೊರಡಿಸಿದೆ. ಆದಾಗ್ಯೂ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವು ಬಾಕಿ ಉಳಿದಿದ್ದು ಭೂ ಸ್ವಾಧೀನ ಕ್ರಮಗಳನ್ನು ಮುಂದುವರಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ.

೫. ಬೆಂಗಳೂರು ಮಹಾನಗರ ಪಾಲಿಕೆ ದಿನಾಂಕ ೨೫-೩-೧೯೮೭ರಲ್ಲಿ ಸದರಿ ಜಮೀನಿನಲ್ಲಿ ಕಟ್ಟಡ ನಿರ್ಮಾಣಕ್ಕೆ ಪ್ಲಾನ್ ಮಂಜೂರಾತಿ ನೀಡಿದ್ದರೂ ಶ್ರೀ ಕೆ. ಎಲ್. ರಾಮಚಂದ್ರ ಹಾಗೂ

ಇತರರು ಎತ್ತಿರುವ ತಕರಾರುಗಳ ಕಾರಣ ಇದುವರೆವಿಗೂ ಕಮೆನ್ಸ್‌ಮೆಂಟ್ ಸರ್ಟೀಫಿಕೇಟ್‌ನ್ನು ನೀಡಿರುವುದಿಲ್ಲ.. ಆದರೂ ಮೆ. ಪರಾಗ್ ಹೋಟೆಲ್ ಇವರು ಕಟ್ಟಡದ ಕೆಲಸವನ್ನು ಪ್ರಾರಂಭಿಸಿದ್ದು ನಿರ್ಮಾಣ ಚಟುವಟಿಕೆಗಳನ್ನು ಮುಂದುವರಿಸುತ್ತಿರುತ್ತಾರೆ. ಈ ಕಾರಣದಿಂದ ಸಂಬಂಧಪಟ್ಟವರಿಗೆ ಕೆ.ಎಂ.ಸಿ. ಆಕ್ಟ್ ಕಾಲಂ ೩೨೧ (೧)ರನ್ವಯ ದಿನಾಂಕ ೪-೬-೧೯೯೦ರಂದು ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡ ನಿರ್ಮಾಣವನ್ನು ಸ್ಥಗಿತಗೊಳಿಸುವಂತೆ ನೋಟೀಸು ಜಾರಿ ಮಾಡಿದೆ. ರಿಟ್ ಅರ್ಜಿಯ ಇತ್ಯರ್ಥವನ್ನು ಕಾಯ್ದಿರಿಸಿ, ನಿರ್ಮಾಣ ಚಟುವಟಿಕೆಗಳನ್ನು ತಕ್ಷಣ ನಿಲ್ಲಿಸುವಂತೆ ಮೆ. ಪರಾಗ್ ಹೋಟೆಲ್‌ವನರಿಗೆ ನಿರ್ದೇಶನ ನೀಡುವಂತೆ ಉಚ್ಚ ನ್ಯಾಯಾಲಯವನ್ನು ಪ್ರಾರ್ಥಿಸುವಂತೆ ಅಡ್ವೋಕೇಟ್ ಜನರಲ್‌ರವರನ್ನು ಕೋರಲಾಗಿದೆ. ಮತ್ತು ಹಾಗಾದಲ್ಲಿ ಅವರು ಈ ನಿರ್ದೇಶನಗಳನ್ನು ಸಹ ಉಲ್ಲಂಘಿಸಿದಲ್ಲಿ ಅವರ ವಿರುದ್ಧ ನ್ಯಾಯಾಲಯ ನಿಂದನೆ ಪ್ರಕರಣವನ್ನು ಜರುಗಿಸಲು ಸಾಧ್ಯವಾಗುತ್ತದೆ.

೬. ಐ.ಡಿ.ಬಿ.ಐ. ಇವರಿಗೆ ಪ್ರಾಜೆಕ್ಟ್ ರಿಪೋರ್ಟ್ ಮಂಜೂರಾತಿಗೆ ಮಂಡಿಸಿರುವ ಬಗ್ಗೆ

ಮೊಗಲೀ ರೂ. ೧೨ ಕೋಟಿ ಸಾಲ ಮಂಜೂರಾತಿಯ ಬಗ್ಗೆಯಾಗಲೀ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ. ಇದು ಒಹಳ ಮಹತ್ವರವಾದ ವಿಚಾರ, ಕಾರಣ ಏನೆಂದರೆ, ಈ ಜಾಗದಿಂದ ಜೋರಾಗಿ ಕೇಳಿದರೆ ಅಲ್ಲಿಗೆ ಕೇಳಿಸುತ್ತದೆ. ಈ ಸಭೆಯಲ್ಲಿ ಜೋರಾಗಿ ಮಾತನಾಡಿದರೆ ಅಲ್ಲಿಗೆ ಕೇಳಿಸುತ್ತದೆ. ಅದೇ ರೀತಿ ರಾಜ್ಯಪಾಲರು ರಾಜಭವನದಲ್ಲಿ ಬೆಲ್ ಒತ್ತಿದರೆ. ಆದು ಆ ಪ್ರದೇಶಕ್ಕೆ ಕೇಳುತ್ತದೆ. ಇಷ್ಟೊಂದು ಹತ್ತಿರ ಇರುವ ಈ ಪ್ರದೇಶದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಕಲಾನ್ಸ್‌ಮೆಂಟ್ ಸರ್ಟಿಫಿಕೇಟ್ ಇಲ್ಲದೇ ಇದ್ದರೂ ಕೂಡಾ ಕಟ್ಟಡವನ್ನು ಕಟ್ಟುತಕ್ಕದ್ದಕ್ಕೆ ಪ್ರಯತ್ನ ಪಟ್ಟಿದ್ದಾರೆಂಬುದನ್ನು ಅವರು ಒಪ್ಪಿದ್ದಾರೆ. ಒಂದಾದರೂ ವಾಸ್ತವಾಂಶವನ್ನು ಒಪ್ಪಿದ್ದಾರೆಂದು ನಾನು ಅವರಿಗೆ ಮೆಚ್ಚುಗೆ ಸೂಚಿಸುತ್ತೇನೆ. ಆದರೆ ಈಗಲೂ ಕೂಡಾ ಅಲ್ಲಿ ಕೆಲಸ ನಡೆಯುತ್ತಿದೆ. ಈಗ ನಾನು ಬರಬೇಕಾದರೆ ಆ ಕಡೆ ಹೋಗಿ ನೋಡಿ ಕೊಂಡು ಬಂದಿದ್ದೇನೆ. ಈಗಲೂ ಅಲ್ಲಿ ಕೆಲಸ ನಡೆಯುತ್ತಿದೆ. ಒಂದು ಸಣ್ಣ ಹಳ್ಳಿಯಲ್ಲಿ ರೈತ ತಪ್ಪು ಮಾಡಿದರೆ ಶೂಲಕ್ಕೇರಿಸತಕ್ಕ ಸರ್ಕಾರ, ಕಾನೂನಿನಲ್ಲಿ ಅವಕಾಶ ಇದ್ದರೆ ಆದು ಸಾಧ್ಯ ಇದೆ, ರೈತನನ್ನು ಶೂಲಕ್ಕೆ ಏರಿಸುವ ಸರ್ಕಾರ, ಇಲ್ಲಿ ಇಷ್ಟೊಂದು ಹತ್ತಿರದಲ್ಲಿ, ರಾಜ್ಯಪಾಲರ ಭವನದ ಎದುರಿನಲ್ಲಿ, ವಿಧಾನಸೌದದ ಪಕ್ಕದಲ್ಲಿ ಇಷ್ಟೊಂದು ತೀವ್ರವಾದ ಕಾನೂನು ಉಲ್ಲಂಘನೆ ನಡೆಯುತ್ತಿದ್ದರೂ ಕೂಡಾ ಸರ್ಕಾರ ಕೈಕಟ್ಟಿ ಕುಳಿತಿರುವುದನ್ನು ನೋಡಿ ನನಗೆ ಈ ವಿಚಾರದಲ್ಲಿ ಏನು ಹೇಳಬೇಕೋ, ಯಾವ ಭಾಷೆ ಉಪಯೋಗ ಮಾಡಬೇಕೆಂದು ದಿಕ್ಕೇ ತೋಚದಾಗಿದೆ ತಾವು ನಮ್ಮ ಸಹಾಯಕ್ಕೆ ಬರಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

೧೨.೪೫ ಪಿ.ಎಂ.

ಬೇಲಿಯೇ ಎದ್ದು ಪೂಲ ಮೇಯ್ದರೆ ಸಾಮಾನ್ಯ ಜನರ ಗತಿಯೇನು ? ಈ ರಾಜ್ಯದಲ್ಲಿ ಸರ್ಕಾರ ಏನಾದರೂ ಇದೆಯೆ ? ಸರ್ಕಾರದ ವ್ಯವಸ್ಥೆ ಏನಾದರೂ ಇದೆಯೆ ? ರಾಜ್ಯಾಂಗ ಎಂಬುದು ಈ ದೇಶದಲ್ಲಿ ಇದೆಯೆ ? ನಾವೆಲ್ಲ ಸಂಪೂರ್ಣ ಕತ್ತಲೆಯಲ್ಲಿದ್ದೇವೆ. ಈ ಬಗ್ಗೆ ಸರ್ಕಾರ ತೀವ್ರವಾದ ಹೊರಯನ್ನು ಹೊರಬೇಕಾಗಿದೆ. ಇದರ ಬಗ್ಗೆ ತನಿಖೆ ಮಾಡಲಿಕ್ಕೆ ಸದನದ ಒಂದು ಸಮಿತಿಯನ್ನು ಮಾಡಿ, ಏಕೆಂದರೆ ೧೯೮೫ನೇ ಇಸವಿಯಲ್ಲಿ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ ವಿನಾಯಿತಿಯನ್ನು ಕೊಟ್ಟಿದ್ದಾರೆ. ಮೂಲ ಅಲ್ಲಿ ಅಡಗಿರುವುದರಿಂದ, ವಿನಾಯಿತಿ ಕೊಟ್ಟಿರುವುದು ಆಶ್ಚರ್ಯ. ಇಲ್ಲಿ ಧರ್ಮಾತ್ಮರು ಯಾರು ಇಲ್ಲ. ಧರ್ಮಾತ್ಮರು ಯಾರಿದ್ದಾರೆಂಬುದು ಈಗಾಗಲೇ ಕುಲದೀಪಸಿಂಗ್ ಆಯೋಗದ ವರದಿಯಿಂದ ಗೊತ್ತಾಗಿದೆ. ನಾನು ಆ ವಿಷಯಕ್ಕೆ ಹೋಗುವುದಿಲ್ಲ. ಅದು ಈ ದೇಶಕ್ಕೆ ಗೊತ್ತಾಗಿದೆ.

ಅಧ್ಯಕ್ಷರು .—ಕುಲದೀಪಸಿಂಗ್ ಆಯೋಗದ ವರದಿ ಇನ್ನೂ ಬಹಿರಂಗವಾಗಿಲ್ಲ. ಅದು ನಿಮಗೆ ಹೇಗೆ ಗೊತ್ತಾಯಿತು ?

ಶ್ರೀ ಸಿ. ಬೈರೇಗೌಡ .—ಈಗಾಗಲೇ ರಾಮಕೃಷ್ಣ ಹೆಗಡೆಯವರು, ಯೋಜನಾ ಆಯೋಗದ ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

ಅಧ್ಯಕ್ಷರು .—ಅವರು ರಾಜೀನಾಮೆ ಕೊಟ್ಟಿದ್ದು ಗೊತ್ತಾಗಿದೆ. ಆದರೆ ಕುಲದೀಪಸಿಂಗ್ ಆಯೋಗದ ವರದಿ ಒಳಗಡೆ ಏನಿದೆ ಎಂಬುದು ನಿಮಗೆ ಹೇಗೆ ಗೊತ್ತಾಗುತ್ತದೆ ?

ಶ್ರೀ ಸಿ. ಬೈರೇಗೌಡ .—ಒಳಗಡೆ ಏನಿದೆ ಎಂಬುದು ಗೊತ್ತಿಲ್ಲ. ಅವನ್ನು ಒಪ್ಪುತ್ತೇನೆ. ಆದರೆ ಅದರ ಪರಿಣಾಮ ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ರಾಮಕೃಷ್ಣ ಹೆಗಡೆಯವರು ರಾಜೀನಾಮೆ ಕೊಟ್ಟಿದ್ದಾರೆ. ನಾನು ಇಷ್ಟಕ್ಕೆ ಸೀಮಿತವಾಗುತ್ತೇನೆ. ರಾಜೀನಾಮೆ ಕೊಟ್ಟಿರುವುದನ್ನು ನಾನೂ ಸಹ ಒಪ್ಪುತ್ತೇನೆ ೧೯೮೩ನೇ ಇಸವಿಯಲ್ಲಿ ಅರ್ಬನ್ ಸೀಲಿಂಗ್ ಆಕ್ಟ್ ಪ್ರಕಾರ ಇದಕ್ಕೆ ವಿನಾಯಿತಿ ಕೊಟ್ಟಿದ್ದಾರೆ. ಯಾರೂ ಕೂಡ ಧಾರಾಳವಾಗಿ ಬಿಟ್ಟು ಕೊಡುವುದಲ್ಲ. ಆದಷ್ಟೂ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ. ಅಂಥಾದರಲ್ಲಿ ಇದು ವಿಧಾನಸೌಧ ಮತ್ತು ರಾಜಭವನಕ್ಕೆ ಕೆಲವು ಗಜ ದೂರದಲ್ಲಿದೆ. ಅರ್ಬನ್ ಸೀಲಿಂಗ್ ಆಕ್ಟ್ ಜಾರಿಯಲ್ಲಿದೆಯೆಂ ? ಇದಕ್ಕಿಂತ ರಾಜ್ಯದಲ್ಲಿ ಇನ್ನಾವುದೂ ಬೇಕಾಗಿಲ್ಲ. ಅರ್ಬನ್ ಸೀಲಿಂಗ್ ಆಕ್ಟ್ ರೂಲ್ ಮಯಲೇಟ್ ಆಗಿದೆ. ಇದು ಎಲ್ಲಿಂದ ಪ್ರಾರಂಭವಾಗಿದೆ ? ಇದು ಸಾಮಾನ್ಯವಾದ ವಿಚಾರ ಖಂಡಿತಾ ಅಲ್ಲ. ಇದರ ಬಗ್ಗೆ ತಾವು ನ್ಯಾಯಾಂಗ ತನಿಖೆ ಮಾಡಲೇಬೇಕು. ಇದರಲ್ಲಿ ತಪ್ಪಿತಸ್ಥರು ಯಾರಿದ್ದಾರೆಂಬುದನ್ನು ಗುರುತಿಸಬೇಕು ಅದಕ್ಕೆ ಒಪ್ಪಿಗೆಯಾಗಲಿಲ್ಲ ಅಂದರೆ ಸದನದ ಸಮಿತಿಯನ್ನು ಮಾಡಿ. ಇದರಲ್ಲಿ ಯಾರಿದ್ದಾರೆಂಬುದನ್ನು ಕೈಡುಹಿಡಿಯಲಿ. ಹಿಂದೆ ಇದ್ದಂತಹ ಸರ್ಕಾರ ಮಾತ್ರವಲ್ಲ, ನಿಮ್ಮ ಸರ್ಕಾರದಲ್ಲಿಯೂ ಕೂಡ ಇದಕ್ಕೆ ರಕ್ಷಣೆ ಸಿಕ್ಕುತ್ತಿದೆ. ನಿಮ್ಮ ಸರ್ಕಾರದಿಂದ ಸಂಪೂರ್ಣ ರಕ್ಷಣೆ ಸಿಕ್ಕಿದೆ. ನಿಮ್ಮ ಸರ್ಕಾರದಲ್ಲಿ ಮಂತ್ರಿಗಳಾಗಿರುವವರು ತಮಗೆ ಒಂದು ಪತ್ರವನ್ನು ಬರೆದಿದ್ದಾರೆ. ಆ ಪತ್ರವನ್ನು ಅಧ್ಯಕ್ಷರ ಗಮನಕ್ಕೆ ಮತ್ತು ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ಸರ್ಕಾರ ಬರಲಿ, ಯಾರಾದರೂ ಅಧಿಕಾರಕ್ಕೆ ಬರಲಿ, ಇಂತಹವರನ್ನು ಬೆಳೆಸುವುದಕ್ಕೆ ಕೆಲವರು ಮುಲಾಜಿಗೆ ಒಳಪಡತಕ್ಕಂಥಾದ್ದು ಒಂದು ಚಾಳಿ ಆಗಿ ಇವೊತ್ತಿನ ದಿವಸ ಪರಿವರ್ತನೆ ಆಗುತ್ತಿದೆ. ಆದ್ದರಿಂದ...

ಶ್ರೀ ಟಿ. ಎಂ. ಮಂಜುನಾಥ .—ಮಾನ್ಯ ಅಧ್ಯಕ್ಷರೇ, ನಾನು ಕ್ರಿಯಾಲೋಪ ಎತ್ತುತ್ತೇನೆ. ನನ್ನ ಕ್ರಿಯಾಲೋಪ ಏನೆಂದರೆ, ಮಾನ್ಯ ಸದಸ್ಯರು ಸೂಚನೆಯಲ್ಲಿರುವುದನ್ನು ಬಿಟ್ಟು ಬೇರೆ ವಿಚಾರವನ್ನು ಪ್ರಸ್ತಾಪ ಮಾಡುವುದು ಸರಿಯಲ್ಲ. ಈ ಸರ್ಕಾರ ಹಾಗೆ ಮಾಡಿದೆ, ಹಿಂದಿನ ಸರ್ಕಾರ ಹಾಗೆ ಮಾಡಿದೆಯೆಂದು ಹೇಳುವುದು ಸರಿಯಲ್ಲ. ಅವರು ಸಹ ಹಿಂದಿನ ಸರ್ಕಾರದಲ್ಲಿ ಮಂತ್ರಿಗಳಾಗಿದ್ದರು. ಅವರ ಸರ್ಕಾರದವರೇ ಪರ್ಮಿಶನ್ ಕೊಟ್ಟಿದ್ದಾರೆ, ಅವರ ಗಮನಕ್ಕೆ ಈ ವಿಚಾರ ಬಂದಾಗ ಅವರೇನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಈ ಸದನದ ಗಮನಕ್ಕೆ ತರುವುದನ್ನು ಬಿಟ್ಟು ವಿನಾ ಕಾರಣವಾಗಿ ಬೇರೆ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ತಾವು ಏನು ಕೇಳಿದ್ದೀರಿ ಅದಕ್ಕೆ ಮಾನ್ಯಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಬೇರೆ ಕ್ಲಾರಿಫಿಕೇಶನ್ ಕೇಳಿದರೆ ಮುಖ್ಯಮಂತ್ರಿಗಳು - ಉತ್ತರ ಕೊಡುತ್ತಾರೆ.

ಶ್ರೀ ಸಿ. ಬೈರೇಗೌಡ .—ನಾನು ಕೊಟ್ಟಿರತಕ್ಕ ಸೂಚನೆಯಲ್ಲಿ ಒಬ್ಬ ಮಂತ್ರಿಗಳು ಇದರಲ್ಲಿ ಹಸ್ತಕ್ಷೇಪ ಮಾಡಂತ್ತಿರುವುದರಿಂದ ಈ ರೀತಿಯಾಗಿ ನಡೆಯುತ್ತಿದೆಯೆಂದು ತಿಳಿಸಿದ್ದೇನೆ. ನನ್ನ ಸೂಚನೆಯಲ್ಲಿ ಇಲ್ಲದೇ ಇರತಕ್ಕ ವಿಚಾರಗಳನ್ನು ನಾನು ಪ್ರಸ್ತಾಪ ಮಾಡುತ್ತಿಲ್ಲ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ತಮಗೆ ಒಬ್ಬ ಮಂತ್ರಿಗಳು ಪತ್ರವನ್ನು ಬರೆದಿದ್ದಾರೆ. ಶ್ರೀ ಎಸ್. ಎಂ ಯಾಹ್ಯಾ, ಎಂ ಎ., ಎಲ್.ಎಲ್.ಬಿ., ಮಿನಿಸ್ಟರ್ ಫಾರ್ ಎನರ್ಜಿ, ಇಂಡಸ್ಟ್ರೀಸ್ ಲೇಬರ್ ಡೇಟೆಡ್ ೨೧-೫-೧೯೯೦, ಅದರಲ್ಲಿ ಡಿಯರ್ ಸಾರ್.....

ಅಧ್ಯಕ್ಷರು. - ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಅವರ ಸ್ಟೇಟ್‌ಮೆಂಟ್‌ನಲ್ಲಿ ಸರ್ಕಾರದ ವತಿಯಿಂದ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಸ್ಪಷ್ಟವಾಗಿ ಸದನದ ಮುಂದೆ ಇಟ್ಟಿದ್ದಾರೆ. ಅದಕ್ಕೆ ಹೈಕೋರ್ಟ್‌ನಿಂದ ಸ್ಟೇ ಆರ್ಡರ್ ಸಿಕ್ಕಿದೆ. ಆದ್ದರಿಂದ ಸ್ಟೇ ಆರ್ಡರನ್ನು ವೆಕೇಟ್ ಮಾಡಿಸುವುದಕ್ಕೆ ಸರ್ಕಾರದವರು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿದ್ದಾರೆ, ಹಾಗೆ ಹೇಳಿದ ಮೇಲೆ ಯಾವುದೇ ಪತ್ರವನ್ನು ಓದತಕ್ಕ ಅವಶ್ಯಕತೆ ಏನಿದೆ ? ತರೂರತೆ ಏನಿದೆ ?

ಶ್ರೀ ಸಿ. ಬೈರೇಗೌಡ .—ಅದು ಮಂತ್ರಿಗಳ ಪತ್ರ.

ಅಧ್ಯಕ್ಷರು .—ಯಾರದೇ ಪತ್ರ ಆಗಲಿ.

ಶ್ರೀ ಸಿ. ಬೈರೇಗೌಡ .—ಸ್ಟೇ ಆರ್ಡರ್ ಎಂದರೆ.....

ಅಧ್ಯಕ್ಷರು .—ಸ್ಟೇ ಆರ್ಡರ್ ಅಂದರೆ ಸ್ಟೇ ಆರ್ಡರ್.....

ಶ್ರೀ ಸಿ. ಬೈರೇಗೌಡ .—ಅದನ್ನು ನಾನು ಒಪ್ಪುತ್ತೇನೆ. ಆದರೆ, ಭೂಮಿ ಮತ್ತು ಆಕಾಶದ ಮಧ್ಯದಲ್ಲಿ ಇರತಕ್ಕಂಥ ಎಲ್ಲರಿಗೂ ಸೇರಿಸಿಗುವುದಿಲ್ಲ. ಕೆಲವು ಅಂಶಗಳ ಬಗ್ಗೆ, ಕೆಲವು ಕ್ರಮಗಳ ಬಗ್ಗೆ

ಮಾತ್ರ ಸ್ಟೇ ಸಿಕ್ಕಿರುತ್ತದೆಯೇ ಹೊರತು ಏನು ಬೇಕಾದರು ಮಾಡಿಕೊಳ್ಳಲಿ ಎಂದು ಸ್ಟೇ ಆರ್ಡರ್ ಸಿಗುತ್ತದೆಯೆ ?

MR. SPEAKER .—Do you have a copy of the stay order? Are you aware? ನಿಮಗೆ ಗೊತ್ತೇ ಇದ? ಈ ವಿಷಯ ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ ಎಂಬುದು ತಮಗೆ ಗೊತ್ತಿದೆಯೇ ?

ಶ್ರೀ ಸಿ. ಬೈರೇಗೌಡ .—ಯಾವ ವಿಚಾರದಲ್ಲಿ ಸ್ಟೇ ಕೊಟ್ಟಿದ್ದಾರೆ ಎಂದು ಅವರು ಹೇಳಲಿ.

ಅಧ್ಯಕ್ಷರು .—ಅದನ್ನು ಹೇಳಿದ್ದಾರಲ್ಲ ?

ಶ್ರೀ ಸಿ. ಬೈರೇಗೌಡ .—ಇಂಥಾದ್ದೇ ವಿಚಾರಕ್ಕೆ ಎಂದು ಹೇಳಿಲ್ಲ. ಈಗ ಕಟ್ಟಿಡ ಕಟ್ಟುತ್ತಿದ್ದಾರೆ. ಈಗಲೂ ಕೂಡ ಕಟ್ಟುತ್ತಿದ್ದಾರೆ, ನಾನು ನೋಡಿಕೊಂಡು ಬಂದಿದ್ದೇನೆ. ಅಲ್ಲಿಗೆ ಸ್ಟೇ ಆರ್ಡರ್ ಏನಿದೆ ಎಂಬುದು ಬೇಕಲ್ಲ ? ಕಟ್ಟಡ ಕಟ್ಟಬಹುದು ಎಂದು ಸ್ಟೇ ಆರ್ಡರ್‌ನಲ್ಲಿದೆ ಎಂದು ಅವರು ಹೇಳಲಿ.....

MR. SPEAKER .—"The Advocate General has also been asked to move the High Court and prayed.....

SRI C. BYREGOWDA—To Vacate stay order. ಏಂದು ಅಷ್ಟೇ ಇರುವುದು.

ಅಧ್ಯಕ್ಷರು .—ಹೌದು,

SRI C. BYREGOWDA .—What is stated in the stay order ? ಸ್ಟೇ ಆರ್ಡರ್‌ನಲ್ಲಿ ಇರತಕ್ಕಂಥಾದ್ದು ನೀವು ಕಟ್ಟಿಡವನ್ನು ಹೇಗೆ ಬೇಕಾದರೂ ಕಟ್ಟಿಕೊಂಡು ಹೋಗಬಹುದು ಎಂದು ಇದೆಯೇ ? ಈಗ ಸುಮಾರು ೫೦ ಅಡಿ ಭೂಮಿ ಮಟ್ಟದಿಂದ ಕೆಳಗಡೆ ಇಳಿದಿದೆ.....

MR. SPEAKER .—See, it is very obvious from the statement.

"The Advocate General has also been asked to move the High Court and pray for issue of direction to M/s. Parag Hotels Pvt. Ltd., to stop the construction activities pending disposal of the writ petition forthwith, so that contempt of the court proceedings could be taken against them and also disobeyed....."

ಶ್ರೀ ಸಿ. ಬೈರೇಗೌಡ .—ತಾವು ದಯವಿಟ್ಟು ಕ್ಷಮಿಸಬೇಕು. ನನಗೆ ಬೇಕಾಗಿರತಕ್ಕಂಥಾದು .....

ಅಧ್ಯಕ್ಷರು .—ನಿಮಗೆ ಬೇಕಾಗಿರತಕ್ಕಂಥ ವಾಸ್ತವಾಂಶವನ್ನು ತಿಳಿಸಿದ್ದಾರೆ.

ಶ್ರೀ ಸಿ. ಬೈರೇಗೌಡ .—ನನಗೆ ಬೇಕಾಗಿರತಕ್ಕಂಥಾದ್ದು ಏನು, ಅವರು ಕಟ್ಟಿಡ ಕಟ್ಟಿಕೊಂಡು ಹೋಗಬಹುದು ಅಂತ ಉಚ್ಚನ್ಯಾಯಾಲಯದ ಆಜ್ಞೆ ಇದೆಯೇ ? ಹಾಗಿದ್ದರೆ ನಾನು ಆ ವಿಚಾರದಲ್ಲಿ ಮಾತನಾಡುವುದಕ್ಕೆ ನನಗೆ ಹಕ್ಕು ಇಲ್ಲ ನಾನು ಮಾತನಾಡುವುದಿಲ್ಲ. ಏಕೆಂದರೆ ನ್ಯಾಯಾಲಯದ ಮಾತಿಗೆ ನಾವು ಮನ್ನಣೆ ಕೊಡಬೇಕಾಗುತ್ತದೆ.

MR. SPEAKER .—Para 3, ಸ್ವಲ್ಪ ನೋಡಿ ; ಅದರಲ್ಲಿ

"The Additional Special Deputy Commissioner, Urban Land Ceiling, in the meanwhile, issued orders under Section 31 of Urban Land Ceiling Act and to demolish on-going construction for certain violations of conditions by the..... Srinivasan, who have filed writ petition No. so and so in in High Court against the order passed by the competent authority. The Court admitted the writ petition and stayed the order issued by the competent authority and also the original order of exemption issued by the Government." ಎಂದು ಇದೆ.

SRI C. BYREGOWDA .—Sir, that is for construction. ಅದನ್ನು ಕಟ್ಟಿಡ ಕಟ್ಟುವುದನ್ನು ಮುಂದುವರೆಸಿದರೆ—

ಅಧ್ಯಕ್ಷರು .—ಸ್ಟೇ ಆರ್ಡರ್ ಎಂದರೆ, ನಾನಂ ಈಗ ಮನೆ ಕಟ್ಟಿಸ್ತಾ ಇದ್ದೀನಿ, ಹೈಕೋರ್ಟ್ ನವರು ಸ್ಟೇ ಆರ್ಡರ್ ಕೊಟ್ಟರೆ, ಅದು ಕಟ್ಟಿಡ ನಿಲ್ಲಿಸಿ ಅಂತಲೋ ಅಥವಾ ಮುಂದುವರಿಸಿ ಅಂತಲೋ ?

ಶ್ರೀ ಸಿ. ಬೈರೇಗೌಡ.—ಸ್ವಾಮಿ ಇವರು ಕೇಳಿರುವಂಥಾದ್ದು ಡೆಮಾಲಿಶನ್ ಅನ್ನು ನಿಲ್ಲಿಸಿ ಎಂದು. ಅಷ್ಟಕ್ಕೆ ಕಟ್ಟಿಡ ಕಟ್ಟಿಕೊಂಡು ಹೋಗಬಹುದು ಎಂದುಇದೆಯೇ ? ತಾವು ಹೇಳಿ, ನಾನು ವಕೀಲನಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅವರು ಊಹಾಪೋಹದ ಮೇಲೆ ಭಾಷಣ ಮಾಡುತ್ತಿದ್ದಾರೆ. ಅವರು ಏನೇನು ಹೇಳಿದ್ದಾರೆ, ಅದರ ಬಗ್ಗೆ ನಾನು ಉತ್ತರ ಕೊಡುತ್ತೇನೆ. ಈಗ ಹೈಕೋರ್ಟಿನವರ ಆರ್ಡರ್ ಏನು ಎಂದು ಅವರು ಕೇಳುತ್ತಿದ್ದಾರೆ. ಹೈಕೋರ್ಟಿನ Operative portion of the order ಏನಿದೆ ಅದನ್ನು ತಮ್ಮ ಮುಂದೆ ನಾನು ಓದುತ್ತೇನೆ.—

> "Pending issue of rule nisi in the aforesaid writ petition, it is hereby ordered by this Court on 9th May 1989 by Hon'ble Justice P. K. Shyamsundar that the operation of the order dated 3rd January 1983 passed by the Respondent No. 1 in No. ULC so and so and order dated 2nd May 1989 passed by the Respondent No. 2 (about demolition) in ULC No. so and so be and the same is hereby stayed."

ಅಷ್ಟೆ. ಆರ್ಡರ್‌ನಲ್ಲಿ ಇರುವುದು ಎಂದರೆ ಡೆಮಾಲಿಶ್ ಎಂದು ನಾವು ಏನು ಆರ್ಡರ್ ಮಾಡಿದ್ದೇವೆ, ಅದನ್ನು ಸ್ಟೇ ಮಾಡಿದ್ದಾರೆ. ಕಟ್ಟುವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆಯೇ, ಅದು ಇದು ಎಂದು ಅವರು ಏನೇನೋ ಕೇಳುತ್ತಿದ್ದಾರೆ. ಆರ್ಡರ್‌ನಲ್ಲಿ ಏನಿದೆ ಎಂದರೆ, ನಾವು ಏನು ಆರ್ಡರ್ ಇಶ್ಯೂ ಮಾಡಿದ್ದೇವೆ ಅದರ ಆಪರೇಶನ್ ಅನ್ನು ಹೈಕೋರ್ಟಿನವರು ಸ್ಟೇ ಮಾಡಿದ್ದಾರೆ. ಪ್ರಶ್ನೆ ಎಲ್ಲಾ ಈಗ ಹೈಕೋರ್ಟಿನ ಮುಂದೆ ಇದೆ.

ಶ್ರೀ ಸಿ. ಬೈರೇಗೌಡ.—ಅವರು ಡೆಮಾಲಿಶನ್ ಅನ್ನು ಸ್ಟೇ ಮಾಡಿದ್ದಾರೆ. ಆದರೆ ಕಟ್ಟಿಡ ಕಟ್ಟಬಹುದು ಎನ್ನುವುದಕ್ಕೆ ಎಲ್ಲಿ ಆಜ್ಞೆ ಕೊಟ್ಟಿದ್ದಾರೆ ? ಕಟ್ಟಬಹುದು ಎಂದು ಎಲ್ಲಿ ಇದೆ ?

ಅಧ್ಯಕ್ಷರು.—ನಾವು ಡೆಮಾಲಿಶ್ ಮಾಡಬೇಕೆಂದು ಕಾರ್ಪೊರೇಷನ್‌ನವರು ಕೇಳುತ್ತಾರೆ, ಆಗ ಕೋರ್ಟಿನವರು ಸ್ಟೇ ಮಾಡಿದ್ದಾರೆಂದು ಹೇಳಿದರೆ, ಕಟ್ಟಿಕೊಂಡು ಹೋಗಿ ಎಂದೇ ಅರ್ಥ ?

ಶ್ರೀ ಸಿ. ಬೈರೇಗೌಡ —ಎಲ್ಲಿಯವರೆಗೆ ಕಟ್ಟಿಸಿದ್ದಾರೆ, ಅದನ್ನು ಮುಂದುವರಿಸಿಕೊಂಡು ಹೋಗಿ ಎಂಬ ಅರ್ಥ ಹೇಗೆ ಆಗುತ್ತದೆ ?

ಅಧ್ಯಕ್ಷರು.—ಹೌದು ಹಾಗೆಯೇ ಅರ್ಥ. ಬೇರೆ ಅರ್ಥ ಬರುವುದಕ್ಕೆ ಕಾರಣ ಇಲ್ಲ.

(Interruption)

Yes, Mr. Anantha Krishna, you are right. Inspite of these things if the owner is continuing with his construction, he does it at his own risk, subject to the decision of the High Court.

SRI KAGODU THIMMAPPA.—At the same time, the Government should have taken action to stop construction. Here, there is no initiative from the Government regarding further construction.

MR. SPEAKER.—Mr. Kagodu Thimmappa, if the Government has taken the plea that while the case is pending before the Hon'ble High Court of Karnataka that he should not proceed with the construction, then perhaps, the point that you have raised would have been valid. They want to stop further construction and demolish whatever has been constructed.

SRI KAGODU THIMMAPPA.—I quite agree with you. There are two questions. One is, stopping further construction of the building and secondly to demolish the already constructed building. So far as the second aspect is concerned, the Government has taken initiative to demolish the building.

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಆಫೀಸರು, ಅವರಿಗೆ ಏನು ನೋಟೀಸ್ ಕೊಟ್ಟಿದ್ದಾರೆ ಎಂದರೆ,

> "I hereby direct Sri Vasanth Jannu to stop construction of the building from this date onwards, failing which action will be taken to demolish the structure,"

ಎಂದು ಹೇಳಿದ್ದಾರೆ. ಕನ್‌ಸ್ಟ್ರಕ್ಷನ್ ಸ್ಟಾಪ್ ಮಾಡಬೇಕು, ಒಂದು ವೇಳೆ ಮಾಡದಿದ್ದರೆ, ಡೆಮಾಲಿಷ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು. ಇದರ ಮೇಲೆ ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಇದರ ಅರ್ಥ ತಾವೇ ವಿಚಾರ ಮಾಡಿ. ಹೈಕೋರ್ಟ್ ಸ್ಟೇ ಆರ್ಡರಿನಲ್ಲೇ ಇದೆ. ಅಡಿಷನಲ್ ಡೆಪ್ಯೂಟಿ ಕಮೀಷನರ್ ಏನು ಆರ್ಡರ್ ಮಾಡಿದ್ದಾರೆ, ಅದನ್ನು ಸ್ಟೇ ಮಾಡಿದ್ದಾರೆ. ಆರ್ಡರ್ ಮಾಡಿದ್ದು ಏನೆಂದರೆ, ಕನ್‌ಸ್ಟ್ರಕ್ಷನ್ ಮುಂದುವರಿಸಬಾರದೆಂದು. ಒಂದು ವೇಳೆ ಮುಂದುವರಿಸಿದರೆ, ಡೆಮಾಲಿಷ್‌ಗೆ ನಾವು ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಎರಡನ್ನೂ ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ.—೧೯೮೫ರಲ್ಲಿ ಇದಕ್ಕೆ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್‌ನಿಂದ ಎಕ್ಸೆಂಪ್ಷನ್ ಕೊಟ್ಟಿದ್ದಾರೆ, ನಿಮಗೆ ಇಂತಹ ಒಂದಲ್ಲ, ಒಂದು ಸಾವಿರ ಕೇಸ್ ತಂದುಕೊಡುತ್ತೇವೆ. ಸ್ವಾಮಿ ಇಷ್ಟು ಜಾಗ ತೆಗೆದುಕೊಳ್ಳಿ, ನಮಗೆ ಇಷ್ಟು ಬಿಟ್ಟುಬಿಡಿ, ಈ ತರಹ ಮಾಡಿಕೊಳ್ಳಿ ಎನ್ನತಕ್ಕಂಥ ಕೇಸುಗಳನ್ನು ತಮಗೆ ತಂದುಕೊಡುತ್ತೇನೆ. ತಾವು ಒಪ್ಪಿ ಅಂತಹ ಎಲ್ಲರಿಗೂ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್‌ನಿಂದ ಎಕ್ಸೆಂಪ್ಷನ್ ಕೊಡುತ್ತೀರಾ ? ಇವತ್ತು ಈ ಕೆಲಸ ಆಗಿದೆ. ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಎಕ್ಸೆಂಪ್ಷನ್ ವಿಚಾರದಲ್ಲಿ ನೂರಾರು ಮೈಲಿ ಹೋಗಬೇಕಾಗಿಲ್ಲ ; ಈ ಕಾನೂನು ಯಾವ ರೀತಿ ಜಾರಿಯಲ್ಲಿದೆ ಎಂಬುದನ್ನು ಇಲ್ಲೇ ವಿಧಾನ ಸೌಧದ ಪಕ್ಕ, ರಾಜಭವನದ ಪಕ್ಕ ಎಷ್ಟರಮಟ್ಟಿಗೆ ಜಾರಿಯಾಗುತ್ತಿದೆ ಎಂಬುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕಾಗಿಲ್ಲ. ಇದನ್ನು ವಿಚಾರಣೆ ಮಾಡುವುದಕ್ಕೆ ನೀವು ಸಿದ್ಧರಿದ್ದೀರಾ ? ವಿಚಾರಣೆ ಮಾಡಿ ಯಾವ ರೀತಿ ಆಯಿತು, ಹೇಗೆ ಆಯಿತು ಎನ್ನುವುದನ್ನು ಈ ಸದನಕ್ಕೆ, ಜನಕ್ಕೆ ತಿಳಿಸುವುದಕ್ಕೆ ತಯಾರಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಹೇಳಿದ್ದಕ್ಕೆ ಉತ್ತರ ಕೊಟ್ಟರೆ, ಮುಂದೆ ಚರ್ಚೆಗೆ ಅವಕಾಶ ಇಲ್ಲವೆಂದು ನನಗನ್ನಿಸುತ್ತದೆ. ಈಗ ಪ್ರಾಸ್ಯ ಸದಸ್ಯರು ಕೇಳಿದರು, ಆ ವೇಕೆಂಟ್ ಲ್ಯಾಂಡ್ ಎಷ್ಟಿತ್ತು ಎನ್ನುವುದು, ೧೯೭೬ರಲ್ಲಿ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಜಾರಿಯಲ್ಲಿ ಬಂತು. ಅದರ ಪ್ರಕಾರ ಈಗಾಗಲೇ ನನ್ನ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದೇನೆ. ಎಷ್ಟು ಭೂಮಿ ಇದಕ್ಕೆ ಸರ್‌ಪ್ಲಸ್ ಆಗುತ್ತದೆ. ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ. ಏಕೆಂದರೆ ಬಿಲ್ಡಿಂಗ್ ಇದ್ದರೆ, ಅದಕ್ಕೆ ಅಪಾರ್ಟ್‌ಮೆಂಟ್ ಮತ್ತೊಂದು ಅದಕ್ಕೆಲ್ಲಾ ಬಿಡಬೇಕಾಗುತ್ತದೆ. ಅದರ ಪ್ರಕಾರ ಈಗ ಅರ್ಬನ್ ಲ್ಯಾಂಡ್ ಪ್ರಕಾರ ನಮಗೆ ಎಕ್ಸಸ್ ಇರುವುದು ೪,೬೪೭.೯೮ ಚ. ಮೀಟರ್ ಇದಲ್ಲದೆ, ಅರ್ಬನ್ ಲ್ಯಾಂಡ್ ಸೀಲಿಂಗ್ ಪ್ರಕಾರ, ಅವರ ಹತ್ತಿರ ಭೂಮಿ ಉಳಿಯುವುದು ೫೭೨೨ ಚದರ ಮೀಟರ್. ಈ ರೀತಿ ಏನು ಭೂಮಿ ಉಳಿಯುತ್ತದೆ, ಅದಕ್ಕೆ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ, ಇದನ್ನು ಸರಂಡರ್ ಮಾಡಿ ಎಂದು ನೋಟೀಸ್ ಕೊಟ್ಟು ಕ್ರಮ ತೆಗೆದುಕೊಂಡಿದ್ದೇವೆ, ಇನ್ನೊಂದು ಕಾನೂನು ಪ್ರಕಾರ ಏನು ಭೂಮಿ ಉಳಿಯುತ್ತದೆ, ಅದನ್ನು ಅಕ್ವೈರ್ ಮಾಡುವುದಕ್ಕೆ ಕೂಡ ನೆಕ್ಷನ್ ೬-ಎ ನೋಟಿಫಿಕೇಷನ್ ಪ್ರಕಾರ ಸರ್ಕಾರದ ವತಿಯಿಂದ ಮಾಡಿದ್ದೇವೆ. ಪ್ರಶ್ನೆ ಏನೆಂದರೆ, ಭೂಮಿ ೪೬೯೭ ಚದರ ಮೀಟರ್ ಇತ್ತು, ಅದಕ್ಕೆ ೧೯೮೫ರಲ್ಲಿ ಎಕ್ಸೆಂಪ್ಷನ್ ಕೊಟ್ಟಿದ್ದಾರೆ.

ಎಕ್ಸೆಂಪ್ಷನ್ ಮೂರು ವರ್ಷದ ಸ್ಥಳವಾಗಿ ಇತ್ತು. ಆದರೆ ಮೂರು ವರ್ಷದಲ್ಲಿ ಅವರು ಕಟ್ಟಡ ಕಟ್ಟಲಿಲ್ಲ. ಕೆಲವು ಷರತ್ತುಗಳನ್ನು ಹಾಕಿ ಎಕ್ಸೆಂಪ್ಷನ್ ಕೊಟ್ಟಿತ್ತು. ಮೂರು ವರ್ಷದಲ್ಲಿ ಕಟ್ಟಡ ಕಟ್ಟುವುದಕ್ಕೆ ಸಾಧ್ಯವಿಲ್ಲ ಎಂದು ಕಾರಣಗಳನ್ನು ಹೇಳಿ, ಮತ್ತೆ ಅವರು ಮೂರು ವರ್ಷ ಎಕ್ಸೆಂಪ್ಷನ್/ಎಕ್ಸ್‌ಟೆನ್ಷನ್ ಮಾಡಿಕೊಂಡರು ೧೯೮೬-೮೭ರಲ್ಲಿ ಮತ್ತೆ ಮೂರು ವರ್ಷ ಎಕ್ಸ್‌ಟೆನ್ಷನ್ ಅನ್ನು ಆಗಿನ ಸರ್ಕಾರ ಮಾಡಿಕೊಟ್ಟಿದೆ. ಎಕ್ಸ್‌ಟೆನ್ಷನ್ ಪೀರಿಯಡ್ ಜನವರಿ ೧೯೯೦ಕ್ಕೆ ಮುಗಿದಿದೆ.

ಈ ಮಧ್ಯದಲ್ಲಿ ಅವರು ಹೋಟೆಲ್ ಬಲ್ಡಿಂಗ್‌ನ ಒಂದು ಪ್ಲಾನ್ ಮತ್ತು ಎಸ್ಟಿಮೇಟ್ಸ್ ಪೂರ್ತಿ ಮಾಡಿ ಕಾರ್ಪೊರೇಷನ್‌ಗೆ ಕೊಟ್ಟು ಲೈಸೆನ್ಸ್ ಕೊಡಬೇಕೆಂದು ಕಾರ್ಪೊರೇಷನ್‌ಗೆ ಕೇಳಿದರು. ಆ ವೇಳೆಗೆ ಕಾರ್ಪೊರೇಷನ್‌ನವರು ನಾವು ಲೈಸೆನ್ಸ್ ಕೊಡುವುದಿಲ್ಲ, ಇದು ಕಂಜೆಸ್ಟೆಡ್ ಏರಿಯಾ ಇದೆ. ಆದುದರಿಂದ ಕೊಡುವುದಿಲ್ಲ ಎಂದು ಖಾದ ಹೂಡಿದ ಮೇಲೆ. ಆ ಪಾರ್ಟಿಗಳು ಹೈಕೋರ್ಟಿಗೆ ಹೋದರು. ಹೈಕೋರ್ಟಿನವರು ಲೈಸೆನ್ಸ್ ಕೊಡಬೇಕೆಂದು ಡೈರೆಕ್ಷನ್ ಕೊಟ್ಟರು. ಆ ರೀತಿಯಿಂದ ಅವರಿಗೆ ಲೈಸೆನ್ಸ್ ಸಿಕ್ಕಿದ್ದು, ಈ ಮಧ್ಯದಲ್ಲಿ ಸ್ವಲ್ಪ ಗಲಾಟೆ ಆದಮೇಲೆ, ಕಾರ್ಪೊರೇಷನ್‌ನವರು ಲೈಸೆನ್ಸ್ ಕೊಟ್ಟಿದ್ದರೂ, ಆ ನಂತರ ಕಮೆನ್ಸ್‌ಮೆಂಟ್ ಸರ್ಟಿಫಿಕೇಟ್ ಕೊಡಲಿಲ್ಲ. ಆದರೂ ಅವರು ಕಮೆನ್ಸ್‌ಮೆಂಟ್ ಸರ್ಟಿಫಿಕೇಟ್ ಇಲ್ಲದೆ ಕೆಲಸ ಪ್ರಾರಂಭ ಮಾಡಿದರು ಇದು ನಮ್ಮ ನೋಟೀಸಿಗೆ ಬಂದು ೧೯೬೯ರಲ್ಲಿ ಅರ್ಬನ್ ಲ್ಯಾಂಡ್ ಸೀಲಿಂಗ್ ಅಥಾರಿಟಿ ಏನಿದ್ದರು ಅವರು ನೋಟೀಸ್ ಕೊಟ್ಟು, ಈ ಕನ್‌ಸ್ಟ್ರಕ್ಷನ್ ಇಲ್ಲಿಗೆ ನೀವು ನಿಲ್ಲಿಸಬೇಕು. ಮತ್ತೆ ಮುಂದೆ ಒಂದು ವೇಳೆ ಕನ್‌ಸ್ಟ್ರಕ್ಷನ್ ಮಾಡಿದರೆ ಅದನ್ನು ಡಿಮಾಲಿಷ್ ಮಾಡುತ್ತೇವೆಂದು ಹೇಳಿದರು. ಈಗ ಇದು ಹಾಗೂ ಎಕ್ಸ್‌ಂಪ್‌ಷನ್ ಎರಡನ್ನೂ ಚಾಲೆಂಜ್ ಮಾಡಿ ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದು, ಎರಡೂ ಆರ್ಡರ್ ಮೇಲೆ ಚಾಲೆಂಜ್ ಮಾಡಿ ಸ್ಟೇ ತಂದಿದ್ದಾರೆ. ಈ ಮಧ್ಯದಲ್ಲಿ ಹೊಸದಾಗಿ ಚುನಾಯಿತವಾದ ಕಾರ್ಪೊರೇಷನ್ ಅಧಿಕಾರಕ್ಕೆ ಬಂದಮೇಲೆ, ಅವರು ಳನೇ ಜೂನ್ ೧೯೭೦ಕ್ಕೆ ಕಾರ್ಪೊರೇಷನ್‌ನಿಂದ. ಈ ಕೆಲಸ ನಿಲ್ಲಿಸಬೇಕೆಂದು ಮತ್ತೆ ಆ ಪಾರ್ಟಿಗಳಿಗೆ ನೋಟೀಸ್ ಕೊಟ್ಟಿದ್ದಾರೆ. ಇಷ್ಟೆಲ್ಲಾ ಆಗಿದ್ದರೂ ಸಹ ಅವರು ಕೆಲಸ ನಡೆಸುತ್ತಿದ್ದಾರೆ ಎಂಬ ಮಾತನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಾನೇ ಕಾರ್ಪೊರೇಷನ್ ಕಮಿಷನರ್‌ರವರನ್ನು ಕರೆಸಿ, ಅವರ ಜೊತೆಯಲ್ಲಿ ವಿಚಾರ ಮಾಡಿದೆ. ಅವರು ಖುದ್ದಾಗಿ ಸ್ಪಾಟ್‌ಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಕಾರ್ಪೊರೇಷನ್‌ರವರು ನೋಟೀಸ್ ಕೊಟ್ಟಮೇಲೆ ೨೬ ರಿಂದ ಕೆಲಸ ನಿಂತಿದೆ. ಏನೂ ಕೆಲಸ ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಕಾಲಮ್ಸ್ ಏನು ಹಾಕಿದ್ದಾರೆ. ಆದರ ಕ್ಯೂರಿಂಗ್ ಸಲುವಾಗಿ ನೀರು ಬಿಡುವ ಕೆಲಸ ಮಾಡುತ್ತಿರ ಬಹುದು ಅಷ್ಟೇ, ಆದನ್ನು ನೋಡಿ ಮಾನ್ಯ ಸದಸ್ಯರು ಹೇಳಿರಬಹುದು. ಆದರೆ ಅಲ್ಲಿ ಬೇರೆ ಕನ್‌ಸ್ಟ್ರಕ್ಷನ್ ವರ್ಕ್ ನಡೆಯುತ್ತಿಲ್ಲ. According to the Commissioner of the Corporation. ಈಗ ಕಾರ್ಪೊರೇಷನ್ ಸ್ಟೇ ಇಲ್ಲ. ಈ ಮಧ್ಯದಲ್ಲಿ ಅವರು ಹಾಗೆಯೇ ಮುಂದುವರಿಸಿಕೊಂಡು ಹೋಗುವುದು ತಪ್ಪು. ಅದಕ್ಕಾಗಿ ಸ್ಟೇ ವೆಕೇಟ್ ಆಗಲಾರದೇ ನಾವು ಮಧ್ಯಸ್ಥಿಕೆ ವಹಿಸುವುದಕ್ಕೆ ಆಗುವುದಿಲ್ಲ ಸ್ಟೇವೆಕೇಟ್ ಆಗಲಾರದೆ ನಾವು ತಡೆಗಟ್ಟುವುದಕ್ಕೆ ಹೋದರೆ ಕಂಟೆಪ್ಟ್ ಆಫ್ ಕೋರ್ಟ್ ಒಳಗೆ ನಾವು ಬರುತ್ತೇವೆ ಎಂದು ಹೇಳಿದ್ದೇನೆ. ಕಾರ್ಪೊರೇಷನ್‌ನವರು ಸ್ಟೇ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಆದಕ್ಕಾಗಿ ಯಾರೂ ಇವರ ಮೇಲೆ ಈ ಸರ್ಕಾರ ಕರುಣೆ ತೋರಿಲ್ಲ. ಹಿಂದಿನದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ಸರಕಾರ ಅವರ ಮೇಲೆ ಏನೂ ಕರುಣೆ ತೋರಿಸಿಲ್ಲ. ಅವರ ಮೇಲೆ ಯಾವ ತರಹ ಉಪಕಾರ ಮಾಡುವ ದೃಷ್ಟಿಕೋನ ಅಥವಾ ಒಂದು ನೀತಿ ಅನುಸರಿಸಿಲ್ಲ. ಹಿಂದೆ ಏನಿಗಿದೆ ಅದು ಬೇರೆ. ಇಪತ್ತು ಏನಾಗಿದೆ ಇದು ನಮ್ಮ ಕಣ್ಣಿಗೆ ಬಿದ್ದಮೇಲೆ ಇದನ್ನು ನಿಲ್ಲಿಸುವ ಪ್ರಯತ್ನ ಏನೇನು ಮಾಡಿದ್ದೇವೆ ಅದನ್ನು ಹೇಳಿದ್ದೇನೆ. ಒಂದು ವಿಚಾರ ಮಾನ್ಯ ಸದಸ್ಯರು ಹೇಳಿದರು. ನಮ್ಮ ವಿದ್ಯುತ್ ಮಂತ್ರಿಗಳಾದ ಶ್ರೀಮಾನ್ ಯಾಹ್ಯಾರವರು ಇದರಲ್ಲಿ ಪಾರ್ಟಿಯಾಗಿದ್ದಾರೆ. ಅವರು ಪತ್ರ ಬರೆದಿದ್ದಾರೆ ಎಂದರು. ಪತ್ರ ಯಾವಾಗ ಬರೆದಿದ್ದಾರೆ ಎಂದರೆ ಅವರು ಆಗ ಮಂತ್ರಿಯಾಗಿ ಇರಲಿಲ್ಲ. ಇದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ.—ನಿಮ್ಮ ಗಮನಕ್ಕೆ ತರುತ್ತೇನೆ. ಮಂತ್ರಿಗಳ ಲೆಟರ್‌ಹೆಡ್‌ನಲ್ಲಿ ಪತ್ರ ಬಂದಿರತಕ್ಕಂಥಾದ್ದು. Sri S. M. Yahya, M.A., L.L.B., Minister for Industries, Energy and Wakfs.

MR. SPEAKER.—I don't permit you to read the letter.

ಶ್ರೀ ವೀರೇಂದ್ರ ಪಾಟೀಲ್.—ಅವರು ಬರೆದಿದ್ದು ಏನು ಎಂದು ನಾನು ಹೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ. ಇದು ಗಮನ ಸೆಳೆಯುವ ಸೂಚನೆ ಇದರ ಮೇಲೆ ಇಷ್ಟು ದೀರ್ಘವಾಗಿ ಚರ್ಚೆ ಮಾಡಿದರೆ ಅಸೆಂಬ್ಲಿ ಕಾರ್ಯಕಲಾಪ ಯಾವ ರೀತಿ ನಡೆಸುವುದು ಎನ್ನುವುದು ತಮಗೇ ಬಿಟ್ಟಿದ್ದದ್ದು, ತಾವು ದಯವಿಟ್ಟು ಇದನ್ನು ಸೀಮಿತಗೊಳಿಸಬೇಕು.

ಅಧ್ಯಕ್ಷರು.—ಸೂಕ್ಷ್ಮವಾಗಿ ಹೇಳಿಬಿಟ್ಟು ಮುಗಿಸಿಬಿಡಿ.

ಶ್ರೀ ಸಿ. ಬೈರೇಗೌಡ.—ಅವರು ಮಂತ್ರಿಯಾಗಿ ಇರಲಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ ಅವರು ಮಂತ್ರಿಗಳಾಗಿದ್ದರು. ಮಂತ್ರಿಗಳಾಗಿದ್ದ ಸಂದರ್ಭದಲ್ಲೇ ಕಾಗದ ಬರೆದಿರತಕ್ಕದ್ದು.

ಅಧ್ಯಕ್ಷರು.—ಅವರು ಕಾಗದ ಬರೆದಿದ್ದರೂ.....

ಶ್ರೀ ವಾಟಾಳ್ ನಾಗರಾಜ್.—ಲೈಸೆನ್ಸ್ ಕೊಟ್ಟಿದ್ದು ಯಾವ ಸರಕಾರ ಎಂಬುದನ್ನು ಹೃದಯವಿಟ್ಟು ಹೇಳಿರಿ, ಯಾವಾಗ ಕೊಟ್ಟಿದ್ದು, ಯಾರು ಕೊಟ್ಟಿದ್ದು ಎಂದು ಹೇಳಬೇಕು. ಏಕೆಂದರೆ ೫೦ ಅಡಿ ಆಳದವರೆಗೆ ಮಣ್ಣು ತೆಗೆಯಬೇಕಾದರೆ.....

ಅಧ್ಯಕ್ಷರು.—ಹೇಳಿ ಆಯಿತಲ್ಲ, ಏನೇ ಇಸವಿಯಲ್ಲಿ ಎಂದು

ಶ್ರೀ ಸಿ. ಬೈರೇಗೌಡ.—ಆ ಪತ್ರದ ಒಂದು ಪ್ಯಾರಾ ಓದಿಬಿಡುತ್ತೇನೆ.

ಅಧ್ಯಕ್ಷರು.—ಇದು ಅಪ್ರಸ್ತುತ. Government has taken every possible step that could be conceived. So, the letter really becomes redundant.

SRI C. BYREGOWDA.—No. no. ಆ ತರಹ ಹೇಳಿಲ್ಲಿ ಮಂತ್ರಿಗಳಾದ ಮೇಲೆ ಒಂದು ಪತ್ರ ಬರೆದಿದ್ದಾರೆ, ಆದರೆ ಮಂತ್ರಿಗಳು ಆಗಿಲ್ಲದೆ ಇರುವಾಗ ಒಂದು ಪತ್ರ ಬರೆದಿದ್ದರೆಂದು ಅವರು ಹೇಳುತ್ತಿದ್ದಾರೆ.

MR. SPEAKER.—After the Chief Minister spelling out the various actions that he has taken, do you think that you still read that letter ?

ಶ್ರೀ ಸಿ. ಬೈರೇಗೌಡ.—ಇವರ ಮೇಲೆ ಒತ್ತಡ ತರುವುದಕ್ಕೆ ಪ್ರಯತ್ನ ನಡೆದಿದೆ. ಇವರ ಮನಸ್ಸನ್ನು ಬದಲಾವಣೆ ಮಾಡುವಂಥಾದ್ದಕ್ಕೆ ಅವರು ಪ್ರಯತ್ನ ಮಾಡಿದ್ದಾರೆ.

MR. SPEAKER.—That has not made any dent on him. Has it made any dent on the Chief Minister ?

SRI C. BYREGOWDA.—How can I say?

MR. SPEAKER.—It becomes very obvious by the replies which he has furnished to this House.

ಶ್ರೀ ಸಿ. ಬೈರೇಗೌಡ.—ಈ ಕಾಗದವನ್ನು ೨೧-೫-೯೦ರಲ್ಲಿ ಬರೆದಿದ್ದಾರೆ, ಆ ಪತ್ರದ ಕೊನೆಯಲ್ಲಿ 'I request that no further steps can be taken' ಎಂದು ಬರೆದಿದ್ದಾರೆ. ಈ ಬಗ್ಗೆ ಲಂಕೇಶ್ ಪತ್ರಿಕೆಯಲ್ಲೂ ಸಹ ವಿವರವಾದ ಒಂದು ಆರ್ಟಿಕಲ್ ಕೂಡ ಬಂದಿದೆ. ಈ ಪತ್ರ ಏನಿದೆ ಅದನ್ನು ಅವರು ಸಹ ರೀಪ್ರೊಡ್ಯೂಸ್ ಮಾಡಿದ್ದಾರೆ.

MR. SPEAKER.—It is alright. ಆರ್ಟಿಕಲ್ಸ್ ಬರುತ್ತದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ.—ಇದರಲ್ಲಿ ಒಬ್ಬ ಮಾನ್ಯ ಸದಸ್ಯರು ಕೂಡ ಶಾಮೀಲಾಗಿದ್ದಾರೆ.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಟ್ಟಮೇಲೆ ನಿಮ್ಮ ಈ ಪ್ರಶ್ನೆಗಳಿಗೆ ನಿಮಗೆ ಇರುವ ಶಂಕೆ, ಆನುಮಾನಗಳಿಗೆ ಯಾವುದೇ ರೀತಿಯ ಆಸ್ಪದ ಇಲ್ಲ ಎಂದು ನಾನು ತಿಳಿದು ಕೊಂಡಿದ್ದೇನೆ.

ಶ್ರೀ ಸಿ. ಬೈರೇಗೌಡ.—ಪ್ರಯತ್ನ ಅಂತೂ ನಡೆಯುತ್ತಿದೆ. ಈ ಕಡೆ ಕುಳಿತುಕೊಂಡಿರತಕ್ಕಂಥ ವರಿಂದಲೂ ನಡೆಯುತ್ತಿದೆ, ಆ ಕಡೆ ಕುಳಿತುಕೊಂಡಿರತಕ್ಕಂಥವರಿಂದಲೂ ನಡೆಯುತ್ತಿದೆ.

ಶ್ರೀ ವೀರೇಂದ್ರ ಪಾಟೀಲ್.—ಅವರು ಇನ್ನೊಂದು ಲೆಟರ್ ಏನು ಬರೆದಿದ್ದಾರೆ ಅದು ನನಗೆ ನೆನಪಿಲ್ಲ. ಅವರು ಆರ್ಡಿನರಿ ಶಾಸಕರಿ ಆಗಿದ್ದಾಗ ನನ್ನ ಹತ್ತಿರ ಬಂದಿದ್ದರು. ಅವರು ಈ ಪಾರ್ಟಿ ನನ್ನ ಕ್ಷೇತ್ರ ಮತ್ತು ಜಿಲ್ಲೆಯವರು ಎಂದು ನನಗೆ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಇದರಲ್ಲಿ ವಿನಾದರೂ ಸಾಧ್ಯವಾದರೆ ಮಾಡಿರಿ ಎಂದು. ಇದರಲ್ಲಿ ಒಂದು ಪ್ರಶ್ನೆ ಸಹ ಇದೆ. ಏನೆಂದರೆ ನಾವು ಮಂತ್ರಿಗಳು ಇರಬಹುದು, ಆದರೆ ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಇರುತ್ತದೆ ಮತ್ತು ನಮ್ಮ ಪಬ್ಲಿಕ್

ಲೈಫ್ ಸಹ ಇರುತ್ತದೆ. ಆಗ ಅವರು ಏನಾದರೂ ಮಾಡಿ ಅವರ ಒತ್ತಾಯಕ್ಕೆ ಮಣಿದು ನಾನು ಏನಾದರೂ ಮಾಡಿದ್ದರೆ ಅದಕ್ಕೆ ನೀವು ಮಂತ್ರಿಗಳು, ನೀವು ಸೇರಿಕೊಂಡು ಮಾಡಿದ್ದೀರಿ ಎಂದು, ಅವರು ಹೇಳಿದ ಪ್ರಕಾರ ಅವರು ಪತ್ರದಲ್ಲಿ ಏನೇ ಬರೆದಿರಲಿ. ಇದರಲ್ಲಿ ನಮ್ಮ ಸರ್ಕಾರ ಏನು ಒಂದು ನಿಲುವು ತೆಗೆದುಕೊಂಡಿದೆ. ಹಿಂದಿನ ಸರ್ಕಾರಗಳು ಇಂಥ ನಿಲುವು ತೆಗೆದುಕೊಂಡಿದ್ದರೆ ಈ ಪ್ರಕರಣ ಬರುತ್ತಿರಲಿಲ್ಲ. ಅದನ್ನು ತಾವು ಒಪ್ಪುತ್ತಿದ್ದೀರಿ. ಅದಕ್ಕೆ ನಾನು ಹೇಳಿದೆ, ಹಿಂದಿನ ಸರ್ಕಾರದಿಂದ ಎಗ್ಜಮ್‌ಷನ್ ಎರಡು ಸಾರಿ ಸಿಕ್ಕಿತು. ಆಮೇಲೆ ನಿಮ್ಮ ಕಾಲದಲ್ಲಿಯೇ ಕಾರ್ಪೊರೇಷನ್‌ನಿಂದ ಲೈಸೆನ್ಸ್ ಸಿಕ್ಕಿತು ಎಂದು.

(ಗೊಂದಲ)

SRI R. V. DESHAPANDE.—Exemption was given on 3-1-1983. Janata Government came to power on 10-1-83. The Janata Government was sworn on 10th January, 1983. As per the Chief Minister statement the exemption was given on 3-1-1983.

SRI VEERENDRA PATIL.—I am talking about extension.

SRI R. V. DESHAPANDE.—The Hon. Chief Minister in his statement has said that the exemption in urban ceiling was given on 3-1-83. I would like to bring to the notice that the exemption was given. Giving extention of time is a routine course.

ಅಧ್ಯಕ್ಷರು. ಅವರು ಹೇಳಿದ್ದು ಹಿಂದಿನ ಸರ್ಕಾರಗಳು ಎಂದು. It might refer to any government that was there ಆದ್ದರಿಂದ ಈಗ ನಿಮ್ಮ ಆನುಮಾನಗಳಿಗೆ ಈಗ ಕಾರಣ ಇಲ್ಲ.

ಶ್ರೀ ಸಿ. ಭೈರೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಒಂದು ಮಾತು ಹೇಳಿದರೆ ಸಾಕು. ಯಾರು ಏನೇ ಹೇಳಲಿ, ಏನು ಕ್ರಮ ತೆಗೆದುಕೊಳ್ಳಬೇಕೆನ್ನುವ ಉದ್ದೇಶ ಇದೆ. ಆ ಕ್ರಮ ತೆಗೆದು ಕೊಳ್ಳುತ್ತಾರೆ ಎನ್ನುವ ಬಗ್ಗೆ ಆಶ್ವಾಸನೆ ಕೊಡಬೇಕು. ಏಕೆಂದರೆ ಇದರಲ್ಲಿ ಪತ್ರ ಸಹ ಬರೆದಿದ್ದಾರೆ. ಈ ಕಡೆ ಇರತಕ್ಕಂಥ ಸದಸ್ಯರು ಕೂಡ ಒಬ್ಬರು ಇದರಲ್ಲಿ ಇದ್ದಾರೆ...

ಅಧ್ಯಕ್ಷರು.—ಅವರದೇ ಆದ ಭಾಷೆಯಲ್ಲಿ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. He has made it very clear and I am satisfied.

ಶ್ರೀ ಎಸ್. ಹೆಚ್. ಕಾಜಲಗಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳನ್ನು ನಾನು ಎರಡು ಪ್ರಶ್ನೆ ಮಾತ್ರ ಕೇಳುತ್ತೇನೆ. ಮೊದಲನೆಯ ದಿನಾಂಕ ೨೧-೫-೮೦ ರಂದು ನಿಮ್ಮ ಮಂತ್ರಿ ಮಂಡಲದ ಒಬ್ಬ ಮಂತ್ರಿಗಳು ತಮಗೆ ಒಂದು ಪತ್ರ ಬರೆದಿದ್ದಾರೆಯೇ ಮತ್ತು ಆ ಪತ್ರದಲ್ಲಿ ಅವರು ಸಮಗೆ ಮಾಲೀಕರ ಜೊತೆ ನೆಗೋಷಿಯೇಶನ್ ಮಾಡುವುದಕ್ಕೆ ಪರವಾನಗಿ ಕೊಡಿ ಎಂದು ಕೇಳಿಲ್ಲವೇ ? The words used are "I want to negotiate with the parties concerned. ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳ ಸಭೆಯಲ್ಲಿ ಒಂದು ನಿರ್ಣಯ ತೆಗೆದುಕೊಂಡರು. ಏನೆಂದರೆ ಸೆಕ್ಷನ್ ೪ರ ಪ್ರಕಾರ ಅಕ್ವಿಜಿಷನ್ ಮಾಡಬೇಕೆಂದು you have rightly taken a decision. After taking the decision—the Hon'ble Minister—one of your colleagues has written a letter to you stating that I want to negotiate with the party. Hence don't proceed further. Whether it is a fact ?

ಶ್ರೀ ವೀರೇಂದ್ರಪಾಟೀಲ್.—ಆ ಪತ್ರವಿನಿದೆಯೋ ಅದು ನನಗೆ ಗೊತ್ತಿಲ್ಲ ಯಾರಾದರೂ ಒಬ್ಬರು ಮಂತ್ರಿಗಳು ಪತ್ರ ಬರೆದಿರಬಹುದು. ಕ್ವೆಶ್ಚನ್ ಏನು ಏಂದರೆ, whether Government has taken any cognizance of the letter ...ಪತ್ರ ಕೊಡಿ ಎಂದು ಅವರು ಒತ್ತಾಯ ಮಾಡಿರಬಹುದು, ಆ ಪತ್ರದಿಂದ ಈ ಕೇಸ್ ಮೇಲೆ ಏನಾದರೂ ಪರಿಣಾಮ ಆಗಿದೆಯೇ ಎಂಬುದನ್ನು ತಾವು ವಿಚಾರ ಮಾಡಬೇಕು. ಈ ಪಾರ್ಟಿ ಇವರ ಮನೆಯಲ್ಲಿ ಕುಳಿತುಕೊಂಡು ಬರೆಸಿಕೊಂಡು ಬಂದಿರಬಹುದು. ಇವರು ಸಹ ಅವರ ಊರಿನವರೇ ಇರಬಹುದು, ನೀವು ಒಂದು ಪತ್ರ ಬರೆಯಿರಿ, ಏನಾದರೂ ಒಂದು ಸಂಧಾನ ಮಾಡಿಕೊಂಡು ತೀರ್ಮಾನ ಮಾಡಿ

ಕೊಳ್ಳುತ್ತೇವೆಂದು ಹೇಳಿರಬಹುದು, ಅದುತಪ್ಪಲ್ಲ. ಆದರೆ, ಆ ಪತ್ರದಿಂದ ನಾವು ಏನಾದರೂ ಪ್ರಭಾವಿತರಾಗಿದ್ದೇವೆಯೇ ಎಂಬುದು ಇಲ್ಲಿರುವ ಪ್ರಶ್ನೆ. ನಾವು ಪ್ರಭಾವಿತರಾಗಿಲ್ಲವೆಂಬುದು ಇದರಿಂದಲೇ ತಿಳಿಯುತ್ತದೆ.

ಶ್ರೀ ಎಸ್. ಹೆಚ್. ಕೌಜಲಗಿ.—ಆ ಪತ್ರ ಓದಿ. ನಿಮ್ಮ ಕಡೆಯೇ ಇದೆ. ಆ ಪತ್ರದಲ್ಲಿ ಏನಿದೆ ಎಂದರೆ 'I want to negotiate with the party'.....Huge amount is involved in this.....

ಅಧ್ಯಕ್ಷರು.—ಮಾನ್ಯ ಕೌಜಲಗಿಯವರೇ ನಾನು ಬೈರೇಗೌಡರಿಗೆ ಹಾಕಿದ ಪ್ರಶ್ನೆಯನ್ನೇ ನಿಮಗೂ ಕೇಳಬೇಕಾಗುತ್ತದೆ. ಏನೆಂದರೆ Has it made any dent on the Government. That is the crux of the matter. Has it made any dent that letter which is purported to have been written by an Hon'ble Minister.....

(ಗೊಂದಲ)

ಅಧ್ಯಕ್ಷರು.—ಶ್ರೀ ಪಟ್ಟಣಶೆಟ್ಟಿಯವರು.

ಶ್ರೀ ಎಂ. ಕೆ. ಪಟ್ಟಣ ಶೆಟ್ಟಿ.—ಏನೂ ಇಲ್ಲ.

ಅಧ್ಯಕ್ಷರು.—ನೀವು ಏನು ಮಾತನಾಡಿಯೇ ಇಲ್ಲ, ನೀವೂ ಕೇಳಬೇಕಾಗುತ್ತದೆ. ಏನಾದರು ಕೇಳಿ

ಶ್ರೀ ಎಂ. ಕೆ. ಪಟ್ಟಣಶೆಟ್ಟಿ —ಸರ್ಕಾರದವರು ಸಂಬಂಧಪಟ್ಟ ಮಾಲೀಕರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಅಧ್ಯಕ್ಷರು.—ಶ್ರೀ ಪ್ರಭಾಕರ್ ರಾಣೆಯವರು.—(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ).

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ, ಏಕೆಂದರೆ, ಕಾಲ್ ಅಟೆನ್ಷನ್ ಸಮಯದಲ್ಲಿ ತಾವು ಬೇರೆಯವರಿಗೆ ಅವಕಾಶ ಕೊಡಬಾರದು. ನನಗೂ ನೀವು ಸಮಯ ಕೊಡಬೇಕಾಗಿಲ್ಲ. ಆದರೆ ಮಾನ್ಯ ಬೈರೇಗೌಡರು ಮಾತನಾಡತಕ್ಕಂಥ ಸಂದರ್ಭದಲ್ಲಿ ಆ ಕಡೆಯ ಸದಸ್ಯರ, ಈ ಕಡೆಯ ಸದಸ್ಯರು, ಇವರಿಗೆ ಏನೋ ಬೆಂಬಲ ಕೊಟ್ಟಿದ್ದಾರೆ ಎನ್ನತಕ್ಕ ರೀತಿಯಲ್ಲಿ ಮಾತನಾಡಿದ್ದಾರೆ. I don't want that it should go on record.....

M. R. SPEAKER.—That is duly taken note of by the House.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾವು ಯಾರೂ ಸಹಿತ ಬೆಂಬಲ ಕೊಟ್ಟಿಲ್ಲ. ಇವರು ಎಲ್ಲರ ಮೇಲೂ ಅಪಾದನೆ ಮಾಡಿದರೆ ನಾವು ಸದನದಲ್ಲಿ ಪ್ರಶ್ನೆಸ್ ಮಾಡುವುದು ಹೇಗೆ ? ಯಾವುದೋ ಪತ್ರಿಕೆಯಲ್ಲಿ ಬಂದರೆ ಇಂಥವರು ಹೀಗೆ ಮಾಡಿದ್ದಾರೆ. ಹಾಗೆ ಮಾಡಿದ್ದಾರೆಂದು ಹೇಳಿದರೆ, ನಾನು ೧೦೮ ಹೇಳಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಅವರು ೧೦೮ ಅಲ್ಲದಿದ್ದರೆ ೧೦೦೮ ಹೇಳಲಿ. ೧೦೦೮ ಮೌಲ್ಯಗಳನ್ನು ಕೊಟ್ಟು ಏನಾಗಿದೆ ?

(ಗೊಂದಲ)

Mr. SPEAKER.—Order, Order please.....Order.

ಶ್ರೀ ಸಿ. ಬೈರೇಗೌಡ.—ಪತ್ರಿಕೆಯಲ್ಲಿ ಏನು ಬಂದಿದೆ ಅದನ್ನು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಆರ್ಡರ್. ಆರ್ಡರ್. ಯಾರಾದರೂ ಒಬ್ಬರು ಮಾತನಾಡಿ.

ಶ್ರೀ ಆರ್. ವಿ. ದೇಶಪಾಂಡೆ.—ಪತ್ರಿಕೆಯಲ್ಲಿ ಏನು ಬರುತ್ತದೋ ಅದರ ಬಗ್ಗೆ ಮಾತನಾಡಬಾರದು. ಪತ್ರಿಕೆಗಳಿಗೆ ಸ್ವಾತಂತ್ರ್ಯ ಇದೆ. ಫಿಕೆ ಬರೆಯುತ್ತೀರೆಂದು ಕೇಳುವುದಕ್ಕೆ ನಮಗೆ ಬರುವುದಿಲ್ಲ. ನಾನು ನನ್ನ ಮಿತ್ರರಿಗೆ ಹೇಳುತ್ತೇನೆ, ಪತ್ರಿಕೆಯಲ್ಲಿ ಬಂದರೂ ಸಹಾ ಒಬ್ಬ ಕಲೀಗ್ ಮೇಲೆ ಹೇಳುವಾಗ ಸ್ವಲ್ಪ ವೆರಿಪೈ ಮಾಡಿ ಹೇಳಬೇಕು. ಈ ತರಹ ಹೇಳುವುದಕ್ಕೆ ಮುಂಚೆ ಅವರು ಸಂಬಂಧಪಟ್ಟ ರೆಕಾರ್ಡ್ಸ್ ಪಟ್ಟಿಯಲ್ಲಿ ಇಡಬೇಕಾಗುತ್ತದೆ. ಅಲಿಗೇಷನ್ ಮಾಡುವ ಮೊದಲು ತಾವು ರೆಕಾರ್ಡ್ ವೆರಿಪೈಮಾಡಿ. ನಂತರ ಬೇಕಾದರೆ ತಾವು ಇಲ್ಲಿ ಮಾತನಾಡಲು ಅವಕಾಶಕೊಡಿ.

೧-೧೫ ಪಿ. ಎಂ.

ಶ್ರೀ ಪಿ. ಜಿ. ಆರ್: ಸಿಂಧ್ಯ.—ಈಗ ಮಾನ್ಯ ಮಂತ್ರಿಯವರು ಏನು ಪತ್ರ ಬರೆದಿದ್ದಾರೆ ಆದರ ಮೇಲೆ ಏನೂ ಆಕ್ಷನ್ ತೆಗೆದುಕೊಂಡಿಲ್ಲ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳೂ ಅವರ ಪರವಾ ಹೇಳಿಕೆಯನ್ನು ಕೊಟ್ಟಿದ್ದಾರೆ, ಮಾನ್ಯ ಮಂತ್ರಿಗಳೂ ಸಹ ಇಲ್ಲಿಯೇ ಇದ್ದಾರೆ. ಆದುದರಿಂದ ನಾವು ಈಗ ಹೇಳಬೇಕಾಗುತ್ತದೆ.

ಅಧ್ಯಕ್ಷರು.—ನಿಮ್ಮ ವಿಚಾರ ಈಗ ಯಾರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇಲ್ಲಿ ನಾನೂ ಉಪನಾಯಕನಾಗಿ ಏತಕ್ಕೆ ಇರುವುದು ? ಈ ಕಡೆ ಇರತಕ್ಕಂಥ ಸದಸ್ಯರು ಎಂದು ಹೇಳಿದ್ದಾರೆ. ಪತ್ರಿಕೆಯನ್ನು ತೋರಿಸಿದ್ದಾರೆ.....

(ಗೊಂದಲ)

ಶ್ರೀ ಸಿ. ಬೈರೇಗೌಡ.—ಈ ಕಡೆ ಇರತಕ್ಕಂಥ ಸದಸ್ಯರು.....

ಅಧ್ಯಕ್ಷರು.—ಅಂದರೆ ಯಾವ ಕಡೆ ಇರತಕ್ಕಂಥವರು ? ಈ ಕಡೆ ಎಂದು ಹೇಳಿ ತಾವು ಶ್ರೀ ಕಮಾಲ್ ಇಸ್ಲಾಂರವರ ಕಡೆ ತೋರಿಸಂತ್ತಾ ಇದ್ದೀರಿ ?.....

ಶ್ರೀ ಸಿ. ಬೈರೇಗೌಡ.—ಅಲ್ಲಿ ಬೇಕಾದಷ್ಟು ಜನರು ಇದ್ದಾರೆ, ನಾನು ಹೇಳತಕ್ಕಂಥಾದ್ದು.....

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಪತ್ರಿಕೆಗಳಲ್ಲಿ ಬಂದುದನ್ನೆಲ್ಲಾ ಇಲ್ಲಿ ತಂದು ಓದುವುದು ಅಲ್ಲ. You have got to verify the veracity of the report...

SRI C. BYREGOWDA.—I don't have any investigating agency.....

MR. SPEAKER.—You have no right to quote the newspapers. If you don't want to take the responsibility if you are incapable of taking up the responsibility even now I yield before you, you take the responsibility for whatever has appeared in the newspaper. You take the responsibility and then read.....

ಶ್ರೀ ಸಿ. ಬೈರೇಗೌಡ.—ಪತ್ರಿಕೆಯಲ್ಲಿ ಬಂದುದನ್ನು ನಾನು ಹೇಳಿದ್ದೇನೆ, ಅವರು ಇಲ್ಲ ಎಂದು ಹೇಳಿದ್ದಾರೆ.....

(ಗೊಂದಲ)

ಶ್ರೀ ಸಿ. ಬೈರೇಗೌಡ:—ನನ್ನ ಹತ್ತಿರ ಇನ್ವೆಸ್ಟಿಗೇಟಿಂಗ್ ಏಜನ್ಸಿ ಏನೂ ಇಲ್ಲ. ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಹೇಳಬೇಕಾಗುತ್ತದೆ. ನಮ್ಮ ಜನರು ಹೇಳಿದ್ದನ್ನು ನಾನು ಹೇಳಬೇಕಾಗಂತ್ತದೆ. ಅಂಥವುಗಳನ್ನು ಈ ಸಭೆಯ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಅದನ್ನು ತಂದಿದ್ದೇನೆ. ಆದು ಇಲ್ಲ ಎಂದರೆ ಮುಗಿಯಿತು ಅಲ್ಲಿಗೆ.

ಅಧ್ಯಕ್ಷರು.—ತಂದಿದ್ದೀರಿ ಬಿಡಿ. It is over now...

ಶ್ರೀ ವಾಟಾಳ್ ನಾಗರಾಜ್.—ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ತಮಗೆ ಕಳುಹಿಸಿದ್ದೆ ಅದು ತಮಗೆ ಬಂದಿದೆಯೇ ಸ್ವಾಮಿ.

ಅಧ್ಯಕ್ಷರು.—ಒಂದು ನಿಮಿಷ ತಾವು ಕುಳಿತ್ತುಕೊಳ್ಳಿ, ಶ್ರೀ ಎಲ್. ಆರ್. ಶಿವರಾಮೇಗೌಡರ ಕಳುಹಿಸಿದ ಗಮನಸೆಳೆಯುವ ಸೂಚನೆಗೆ ಬಾಲಾಗ್ರಹ ಪೀಡೆ ಹಿಡಿದಿದೆ ಎಂದು ಕಾಣುತ್ತದೆ. ಇದ ಮಾರನೆಯ ಸಲ ಇಲ್ಲಿ ಬರುತ್ತಿರುವುದೆಂದು ಕಾಣುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಈ ಗಮನ ಸೆಳೆಯುವ ಸೂಚನೆ ಮೊದಲನೇ ದಿವಸ ಆವರು ಇರಲಿಲ್ಲ, ಮತ್ತು ಎರಡು ಸಾರಿ ಮುಂದಕ್ಕೆ ಹೋಗಿತ್ತು, ಇವೊತ್ತು ಸೇರಿ ಇದು ನಾಲ್ಕನೆಯ ಸಾರಿ ಮುಂದಕ್ಕೆ ಹೋಗುತ್ತಿರುವುದು.

ಅಧ್ಯಕ್ಷರು.—ಈಗ ಮತ್ತೆ ಮಾನ್ಯ ಸಚಿವರು permit me to answer this question on 9th July, 1990 which happens to be my question day ಎಂದು ಹೇಳಿದ್ದಾರೆ. ಏಳು ದಿವಸ ಸಮಯ ಬೇಕಾಗುತ್ತದೆ ಎಂದು ಕೇಳಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ತಾವು ಸಮಯ ಕೊಟ್ಟರೆ ನನ್ನ ಅಭ್ಯಂತರವಿಲ್ಲ. ಆದರೆ ೭ ದಿನಗಳು ಆದ ಮೇಲೆ ಅವರು ಉತ್ತರ ಕೊಡುವುದರೊಳಗಾಗಿ ರೈತರ ಬಿತ್ತನೆ ಎಲ್ಲಾ ಮುಗಿದು ಹೋಗುತ್ತದೆ. ಆವರಿಗೆ ಆಗ ಗೊಬ್ಬರದ ಅವಶ್ಯಕತೆ ಇರುವುದಿಲ್ಲ. ಆದಕ್ಕಾಗಿ ಮುಂದಕ್ಕೆ ಹಾಕಿಸ್ತಿದ್ದಾರೋ ಅಥವಾ ಬೇರೆ ಯಾವುದಾದರೂ ಕಾರಣ ಇದೆಯೋ ? ಎಂಬುದನ್ನು ಕೇಳುತ್ತಿದ್ದೇನೆ. ಏಕೆಂದರೆ ಇದು ಬಹಳ ಪ್ರಾಮುಖ್ಯತೆಯ ವಿಚಾರ.

MR. SPEAKER.—What is the particular difficulty. Karnataka Agricultural Marketing Federation is located in Bangalore. Is it not ?

ಡಾ : ಹೆಚ್. ಆರ್. ರಾಜು.—ಮಾನ್ಯ ಅಧ್ಯಕ್ಷರೆ, ಉತ್ತರವು ಈಗ ನನ್ನ ಕೈ ಸೇರಿದೆ. ಮಾನ್ಯ ಸದಸ್ಯರಿಗೆ ಆದು ತಲುಪಿರಲಿಕ್ಕಿಲ್ಲ ಎಂದು ಗಾಣುತ್ತದೆ. ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು.—ಆಗಬಹುದು.

ಶ್ರೀ ವಾಟಾಳ್ ನಾಗರಾಜ್ —ಕಾಸರಗೋಡಿನ ವಿದ್ಯಾರ್ಥಿಗಳನ್ನು ನಮ್ಮ ರಾಜ್ಯದಲ್ಲಿ ಶಾಲಾ ಕಾಲೇಜುಗಳಿಗೆ ಸೇರಿಸಿಕೊಳ್ಳುತ್ತಾ ಇಲ್ಲ. ನಾನು ಮತ್ತು ಇನ್ನೂ ಅನೇಕ ಜನ ಸದಸ್ಯರು ಸಹಿ ಮಾಡಿ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇವೆ. ಈಗ ಶಾಲಾ ಕಾಲೇಜುಗಳ ಪ್ರವೇಶ ಸಮಯ. ಆದ್ದರಿಂದ ಈ ವಿಚಾರದ ಬಗ್ಗೆ ನಿರ್ಣಯ ಆಗಬೇಕಾಗಿದೆ. ಗಡಿನಾಡಿನ ಕನ್ನಡಿಗರಿಗೆ ಈ ಒಂದು ಸೌಲಭ್ಯವನ್ನು ಒದಗಿಸಿಕೊಡುತ್ತಾ ಇಲ್ಲ. ದಯವಿಟ್ಟು ಅವಕಾಶ ಮಾಡಿಕೊಡಿ.....

ಅಧ್ಯಕ್ಷರು.—ನಾನು ಇನ್ನೂ ನೋಡಿಲ್ಲ. ಅದನ್ನು ನಾನು ನೋಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಈಗ ನಮ್ಮ ಊರನಲ್ಲಿಯು ವಿದ್ಯಾರ್ಥಿಗಳಿಗೇ ನಮ್ಮಲ್ಲಿ ಸೀಟು ಕೊಡುತ್ತಿಲ್ಲ.

ಶ್ರೀ ಟಿ. ಎಂ. ಮಂಜುನಾಥ.—ನಮ್ಮ ಜಿಲ್ಲೆಯಲ್ಲಿ ಐಪಿ ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಕೊಡ ತಕ್ಕಂಥ ವಿಚಾರದಲ್ಲಿ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು.—ಇವೊತ್ತು ಇಲಾಖೆ ಬೇಡಿಕೆ ಮೇಲೆ ಚರ್ಚೆ ಇದೆ. ಆದರಲ್ಲಿ ತಾವು ಪ್ರಸ್ತಾಪಿಸ ಬಹುದು.

ನಿಯಮ ೩೫೪ರ ಮೇರೆಗೆ

ಅಧ್ಯಕ್ಷರು.—ಶ್ರೀ ಶ್ರೀರಂಗದೇವರಾಯಲು ಅವರು ಶ್ರೀ ಕೆ. ಲಕ್ಕಪ್ಪನವರು...

ಶ್ರೀ ಕೆ. ಲಕ್ಕಪ್ಪ.—ನನಗೆ ನೋಟೀಸ್ ಕಾಪಿ ಕೊಟ್ಟಿಲ್ಲ.

ಅಧ್ಯಕ್ಷರು.—ಸರಿ ಬಿಡಿ. ಶ್ರೀ ಯಡಿಯೂರಪ್ಪನವರು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನೋಟೀಸ್ ಕಾಪಿ ನನ್ನ ಬಳಿ ಇಲ್ಲ.

ಅಧ್ಯಕ್ಷರು.—ಕಾಪಿ ನೀವು ಇಟ್ಟುಕೊಳ್ಳಬೇಕಾಗಿತ್ತು. ಶ್ರೀ ಕೆ. ಸೋಮಪ್ಪ ಸುವರ್ಣ.

ಶ್ರೀ ಕೆ. ಸೋಮಪ್ಪ ಸುವರ್ಣ.—ನನಗೆ ಪ್ರಶ್ನೋತ್ತರದಲ್ಲಿ ಉತ್ತರ ಬಂದಿರುವುದರಿಂದ ಇದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ.

ಅಧ್ಯಕ್ಷರು.—ಸರಿ. ಶ್ರೀ ರಮಾನಾಥ ರೈ ಅವರು.

ಕಾಳಿಂಗ ನಾವಡರವರ ಕುಟುಂಬಕ್ಕೆ ಆರ್ಥಿಕ ಸಹಾಯ

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೇ, ಯಕ್ಷಗಾನ ಕಲಾ ಜಗತ್ತಿನಲ್ಲಿ ಕಿರಿಯ ಪ್ರಾರಂಭದಲ್ಲಿ ಅಪ್ರತಿಮ ಸೇವೆ ಸಲ್ಲಿಸಿ ಮಧುರ ಕಂಠದ ಹಾಡುಗಾರಿಕೆಯಿಂದ ಕರಾವಳಿ ಜನರ ಮನಸ್ಸನ್ನು ಸೂರೆಗೊಂಡು ಯಕ್ಷಗಾನ ರಂಗದಲ್ಲಿ ಅಪ್ರತಿಮ ಹಾಡುಗಾರನಾಗಿ ಸ್ವತಃ ಯಕ್ಷಗಾನ ಕೃತಿಯನ್ನು ಬರೆದು ಕೇವಲ ೩೫ ವರ್ಷ ವಯಸ್ಸಿನಲ್ಲಿ ಅಪಘಾತಕ್ಕೆ ಒಳಗಾಗಿ ವಿಧಿವಶರಾದಂತಹ ಕಾಳಿಂಗ ನಾವಡ, ಕಷ್ಟದಿಂದ ಇರುವ ಅವರ ಕುಟುಂಬಕ್ಕೆ ಆರ್ಥಿಕವಾಗಿ ಕನ್ನಡ ಸಂಸ್ಕೃತಿ ಇಲಾಖೆಯಿಂದ ಸಹಾಯ ಮಾಡಬೇಕಾಗಿ ನಿಮ್ಮ ಮೂಲಕ ಕೇಳಿಕೊಳ್ಳುತ್ತೇನೆ.